# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

ದಿನಾಂಕ:03.02.2014ರಂದು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು ಇಲ್ಲಿ ಮಧ್ಯಾಹ್ನ 12.00ಗಂಟೆಗೆ ನಡೆದ 198ನೇ ನಿರ್ದೇಶಕ ಮಂಡಳಿಯ ಸಭಾ ನಡವಳಿಗಳು:

**ಹಾಜರಾತಿ:**

| | | |
|---|---|---|
| 1. ಶ್ರೀ.ಹೆಚ್.ಆಂಜನೇಯ,<br>ಮಾನ್ಯ ಅಧ್ಯಕ್ಷರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | – | ಅಧ್ಯಕ್ಷರು |
| 2. ಡಾ. ಇ.ವೆಂಕಟಯ್ಯ, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ | – | ಸದಸ್ಯರು |
| 3. ಶ್ರೀ.ಎಸ್.ಎನ್. ಜಯರಾಂ, ಭಾ.ಆ.ಸೇ.,<br>ಆಯುಕ್ತರು<br>ಸಮಾಜ ಕಲ್ಯಾಣ ಇಲಾಖೆ | – | ಸದಸ್ಯರು |
| 4. ಶ್ರೀ.ಹೀರಾನಾಯಕ್, ಕೆ.ಎ.ಎಸ್(ಎಸ್.ಟಿ.ಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | – | ಸದಸ್ಯರು |
| 5. ಶ್ರೀ.ರಾಮಚಂದ್ರಯ್ಯ<br>ಉಪ ಕಾರ್ಯದರ್ಶಿಗಳು(ಕಲ್ಯಾಣ)<br>ಆರ್ಥಿಕ ಇಲಾಖೆ,<br>ಕರ್ನಾಟಕ ಸರ್ಕಾರ | – | ಸದಸ್ಯರು |
| 6. ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ<br>ಕರ್ನಾಟಕ ಸರ್ಕಾರ | – | ಸದಸ್ಯರು |
| 7. ಡಾ. ಆರ್.ರಾಜು, ಭಾ.ಅ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | – | ಸದಸ್ಯ ಕಾರ್ಯದರ್ಶಿಗಳು |

**ಗೈರು ಹಾಜರಿ:**

1. ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು,
   ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ
   ಭಾರತ ಸರ್ಕಾರ, ನವದೆಹಲಿ
2. ನಿರ್ದೇಶಕರು,
   ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ
   ಭಾರತ ಸರ್ಕಾರ, ನವದೆಹಲಿ

Draft 04/02/2014

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮಾನ್ಯ ಅಧ್ಯಕ್ಷರು ಹಾಗೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಇತರೆ ಹಾಜರಿದ್ದ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ ಕೋರಂ ಇರುವುದನ್ನು ಖಾತ್ರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಅಂತೆಯೇ 198ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು ಹಾಗೂ ನಿಗಮದ ಅಧ್ಯಕ್ಷರನ್ನು ಕೋರಿದರು. ಅಂತೆಯೇ ಜರುಗಿದ 198ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ.

**ವಿಷಯ ಸಂಖ್ಯೆ:01: 197ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು.**

ದಿನಾಂಕ:23.10.2013ರಂದು ನಡೆದ 197ನೇ ನಿರ್ದೇಶಕರ ಆಡಳಿತ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳು ಬಾರದ ಪ್ರಯುಕ್ತ ಸಭೆಯು ಸದರಿ ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 02 : 197ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಅನುಸರಣಾ ವರದಿ.**

197ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಜರುಗಿಸಿದ ಕ್ರಮದ ಬಗ್ಗೆ ಸಭೆಯು ಪರಾಂಭರಿಸಿತು ಮತ್ತು ಯಥಾವತ್ತಾಗಿ ಒಪ್ಪಿತು. ಮುಂದುವರೆದು, ಚರ್ಚೆಯ ಸಮಯದಲ್ಲಿ ಸಭೆಯು ನೀಡಿದ ಇತರೆ ನಿರ್ಣಯಗಳನ್ನು ಅನುಪಾಲನ ವರದಿಯಲ್ಲಿ ತಿಳಿಸಿದ ಅಂಶಗಳಿಗೆ ಅನ್ವಯವಾಗುವಂತೆ ಸೇರಿಸಲಾಗಿದೆ.

| ಕ್ರ.ಸ | ವಿಷಯ ಸಂಖ್ಯೆ | ವಿಷಯ | ಕೈಗೊಂಡಿರುವ ಕ್ರಮ | 198ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಮುಂದುವರೆದು ತೆಗೆದುಕೊಂಡ ನಿರ್ಣಯ |
|---|---|---|---|---|
| 1 | 1 | 197ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು. | | |
| 2 | 2 | ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಮೋದನೆ ನೀಡುವ ಬಗ್ಗೆ. | ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ 197ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ನೀಡಲಾಗಿರುವ ಅನುಮೋದನೆಯಂತೆ Schedule-II, Statement-1, Sl.No.7 ಗೆ ನಿಗದಿಪಡಿಸಲಾಗಿದ್ದ 2 ವರ್ಷಗಳ Work Experience ಅರ್ಹತೆಯನ್ನು ಕೈ ಬಿಡಲಾಗಿದೆ. ಅಂತೆಯೇ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು 198ನೇ ನಿರ್ದೇಶಕ ಮಂಡಳಿ ಸಭೆಗೆ ಮಂಡಿಸಿದೆ. | 198ನೇ ನಿರ್ದೇಶಕ ಮಂಡಳಿಗೆ ಮಂಡಿಸಿದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಯಥಾವತ್ತಾಗಿ ಸಭೆಯು ಒಪ್ಪಿತು ಮತ್ತು ಅಧಿಸೂಚನೆ ಹೊರಡಿಸಿ ವ್ಯವಸ್ಥಾಪಕ ನಿರ್ದೇಶಕರು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸಲಹೆ ನೀಡಿತು. |
| 3 | 3 | ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಬಾಕಿ ಉಳಿದ 4608 ಕೊಳವೆಬಾವಿಗಳನ್ನು ಪರಿಷ್ಕೃತ ಘಟಕ ವೆಚ್ಚದಂತೆ ಕೊರೆಯುವ ಬಗ್ಗೆ | 198ನೇ ಆಡಳಿತ ಮಂಡಳಿಯ ಸಭೆಗೆ ಮಂಡಿಸಿರುವ ವಿಷಯ 14 ರಂತೆ ಪುಟ ಸಂಖ್ಯೆ 31ರಲ್ಲಿ ಲಗತ್ತಿಸಿದೆ. | 198ನೇ ಆಡಳಿತ ಮಂಡಳಿ ಸಭೆಯ ವಿಷಯ 14ರಡಿಯಲ್ಲಿ ನಿರ್ಣಯಿಸಲಾಗಿದೆ. |

Draft 04/02/2014

| | | | | |
|---|---|---|---|---|
| 4 | 4 | ವೈದ್ಯಕೀಯ ಕಾರಣದ ಮೇಲೆ ನಿವೃತ್ತಿಗೊಂಡ ಶ್ರೀ ಶ್ಯಾಮರಾಯ, ದಲಾಯತರು ಇವರ ಮಗ ಶ್ರೀ ರೇವಣಸಿದ್ದಪ್ಪ ರವರಿಗೆ ಅನುಕಂಪ ಆಧಾರದ ಮೇಲೆ ನಿಗಮದಲ್ಲಿ ನೌಕರಿ ನೀಡುವ ಬಗ್ಗೆ. | ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 46 ಸೇಅನೇ 2012, ಬೆಂಳೂರು ದಿನಾಂಕ:25.10.2013ರಂತೆ ಪರಿಶೀಲಿಸಲಾಗುತ್ತಿದೆ. ಅಂತೆಯೇ ಕ್ರಮ ಕೈಗೊಳ್ಳಲಾಗುವುದು. | ಈ ವಿಷಯವನ್ನು ಅವಲೋಕನ ಮಾಡಿದ ಆಡಳಿತ ಮಂಡಳಿ ಸಭೆಯು ಸರ್ಕಾರಕ್ಕೆ ಪತ್ರ ಬರೆದು ಆಡಳಿತ ಮಂಡಳಿಯು ತೆಗೆದುಕೊಂಡಿರುವ ತೀರ್ಮಾನದಂತೆ ಸದರಿ ಅನುಕಂಪದ ನೌಕರಿಯನ್ನು ನೀಡುವ ಬಾಧ್ಯತೆಯ ಬಗ್ಗೆ ಸರ್ಕಾರದ ಗಮನಕ್ಕೆ ತಂದು ವ್ಯವಸ್ಥಾಪಕ ನಿರ್ದೇಶಕರು ಕ್ರಮ ಕೈಗೊಳ್ಳಲು ತೀರ್ಮಾನಿಸಿತು. |
| 5 | 5ಅ | ಶ್ರೀ ಟಿ.ವಿಶ್ವನಾಥ್ (ಸೇವೆಯಿಂದ ವಜಾಗೊಂಡಿರುವ ಜಿಲ್ಲಾ ವ್ಯವಸ್ಥಾಪಕರು) ಇವರನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಂತೆ ನಿಗಮದ ಸೇವೆಗೆ ಪುನರ್ ನೇಮಕ ಮಾಡಿಕೊಳ್ಳುವ ಬಗ್ಗೆ. | ದಿನಾಂಕ:28.12.2013ರಂದು ಮರು ನೇಮಕ ಆದೇಶ ಮಾಡಿ ಅದರಂತೆ ಆದೇಶ ಸಂಖ್ಯೆ:ಡಾ:ಬಿ.ಆರ್.ಅಂಅನಿ:ಸಿ–ಆ:ಜಿವ್ಯ:81–82: 2013–14:16390–395, ದಿನಾಂಕ:06.01.2014 ರಲ್ಲಿ ಸದರಿಯವರನ್ನು ಸೇವೆಗೆ ಸ್ಥಳನಿಯುಕ್ತಿಗೊಳಿಸಿ ಬೆಂಗಳೂರು ನಗರ ಜಿಲ್ಲೆಗೆ ಜಿಲ್ಲಾ ವ್ಯವಸ್ಥಾಪಕರನ್ನಾಗಿ ನೇಮಿಸಿದೆ. | |
| 5 | 5ಆ | ಶ್ರೀ ಎಲ್. ಹನುಮಯ್ಯ(ಸೇವೆಯಿಂದ ವಜಾಗೊಳಿಸಿರುವ) ದ್ವಿತೀಯ ದರ್ಜೆ ಸಹಾಯಕರು, ಇವರನ್ನು ನ್ಯಾಯಾಲಯದ ತೀರ್ಪಿನಂತೆ ನಿಗಮದ ಸೇವೆಗೆ ಪುನರ್ ನೇಮಿಸಿಕೊಳ್ಳುವ ಬಗ್ಗೆ. | ದಿನಾಂಕ:28.12.2013ರಂದು ಮರು ನೇಮಕ ಆದೇಶ ಮಾಡಿ ಅದರಂತೆ ಮರುನಿಯುಕ್ತಿಗೊಳಿಸಿ ಆದೇಶ ಸಂಖ್ಯೆ:ಡಾ:ಬಿ.ಆರ್.ಅಂಅನಿ;ಸಿ–ಆ:ಕಿಸ:00–01:2013–14:16304–309 ದಿನಾಂಕ:03.01.2014ರಲ್ಲಿ ಸದರಿಯವರನ್ನು ಸೇವೆಗೆ ಮರು ನೇಮಕ ಮಾಡಿ ಕೊಪ್ಪಳ ಜಿಲ್ಲೆಗೆ ಕಿರಿಯ ಸಹಾಯಕರನ್ನಾಗಿ ನೇಮಿಸಿದೆ. | |
| 6 | 6 | ನಿಗಮದ ವಿವಿಧ ಯೋಜನೆಗಳಡಿ ಫಲಾಪೇಕ್ಷಿಗಳನ್ನು ಆಯ್ಕೆಯ ಕಾಲಮಿತಿ ಬಗ್ಗೆ. | ಕ್ರಮ ವಹಿಸಲಾಗಿದೆ. | 2013–14ನೇ ಸಾಲಿಗೆ ಅನ್ವಯವಾಗುವಂತೆ ಈಗ ಪ್ರಗತಿಯಲ್ಲಿರುವ ಮಾನ್ಯ ಶಾಸಕರುಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ಜನವರಿ 2014ರ ಅಂತ್ಯದೊಳಗೆ ಮುಗಿಸದಿದ್ದಲ್ಲಿ ಪ್ರಧಾನ ಕಾರ್ಯದಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಸಮಕ್ಷಮತೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಸದರಿ ಆಯ್ಕೆ ಪ್ರಕ್ರಿಯೆಯನ್ನು ಸರ್ಕಾರದ ವತಿಯಿಂದ ಮಾಡಿ |

Draft 04/02/2014

| | | | | |
|---|---|---|---|---|
| | | | | ಫಲಾಪೇಕ್ಷಿಗಳಿಗೆ ಸವಲತ್ತುಗಳನ್ನು ನೀಡಲು ಅನುವಾಗುವಂತೆ ಕ್ರಮಕೈಗೊಳ್ಳಲು ತೀರ್ಮಾನಿಸಿತು. |
| 7 | 7 | ನಿಗಮದಲ್ಲಿ ದಿನಗೂಲಿ/ನಿಗದಿತ ವೇತನದ ಆಧಾರದಡಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ವೇತನವನ್ನು ಹೆಚ್ಚಿಸುವ ಬಗ್ಗೆ. | ದಿನಗೂಲಿ/ನಿಗದಿತ ವೇತನದ ಆಧಾರದಡಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ವೇತನವನ್ನು ಹೆಚ್ಚಿಸಲಾಗಿದೆ. ಆದರೆ ವಾಹನ ಚಾಲಕರು ಮತ್ತು ಬೆರಳಚ್ಚುಗಾರರ ವೇತನ ಶ್ರೇಣಿಯು ಒಂದೇ ಇದ್ದು, ಬೆರಳಚ್ಚು ತಪ್ಪಿನಿಂದಾಗಿ ವಾಹನ ಚಾಲಕರಿಗೆ ರೂ.12,000/-ಕ್ಕೆ ಬದಲಾಗಿ ರೂ.11,000/- ಎಂದು ನಮೂದಾಗಿರುತ್ತದೆ. ಈ ವ್ಯತ್ಯಾಸವನ್ನು ಸರಿಪಡಿಸಿ ರೂ.12,000/- ಎಂದು ತಿದ್ದುಪಡಿ ಮಾಡಬೇಕಾಗಿದೆ. | ಪ್ರಸ್ತಾಪಿಸಿರುವ ತಿದ್ದುಪಡಿಗೆ ಸಭೆಯು ಒಪ್ಪಿತು. |
| 8 | 8 | ವಿಭಾಗೀಯ ಕಚೇರಿಗಳಿಗೆ ಕಿಯೋನಿಕ್ಸ್ ಸಂಸ್ಥೆಯಿಂದ ಹೊರಮೂಲ ಅಭ್ಯರ್ಥಿಗಳನ್ನು ಪಡೆಯುವ ಬಗ್ಗೆ. | ವಿವರವನ್ನು ಚರ್ಚೆಗಾಗಿ ಲಗತ್ತಿಸಲಾಗಿದೆ. | ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದ ಹೊರಮೂಲ ಗುತ್ತಿಗೆಯ ನೌಕರರುಗಳ ವಿವರಗಳನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು.<br>1. ನಿಗಮದಲ್ಲಿ ವಿವಿಧ ಹಂತಗಳಲ್ಲಿ ಹೆಚ್ಚುವರಿಯಾಗಿ ಹೊರಮೂಲದ ಆಧಾರದ ಮೇಲೆ ತೆಗೆದುಕೊಂಡಿರುವ ಸಿಬ್ಬಂದಿಗಳ ಅಗತ್ಯತೆಯ ಬಗ್ಗೆ ಹಾಗೂ ನಿಗಮದಲ್ಲಿ ಇರಬಹುದಾದ ಕೆಲಸದ ಒತ್ತಡದ ಬಗ್ಗೆ ಪುನರ್ ಪರಿಶೀಲಿಸಿ ಮುಂದಿನ ಆಡಳಿತ ಮಂಡಳಿಗೆ ವಿವರಗಳೊಂದಿಗೆ ವಿಷಯ ಮಂಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸಲಹೆ ನೀಡಿತು. |

Draft 04/02/2014

**ವಿಷಯ ಸಂಖ್ಯೆ:03: ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಯನ್ನು ಅನುಷ್ಠಾನಗೊಳಿಸುವ ಬಗ್ಗೆ.**

ವಿಷಯವನ್ನು ಸವಿಸ್ತಾರವಾಗಿ ಚರ್ಚಿಸಿದ ಆಡಳಿತ ಮಂಡಳಿಯು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ರವರ ಪತ್ರ ಸಂಖ್ಯೆ:ಸಿಆಸುಇ/03/ಹೈಕಉ/2013, ದಿನಾಂಕ:29.08.2013 ರಲ್ಲಿನ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಾಗೂ ರಾಜ್ಯಮಟ್ಟದ ಕಛೇರಿಗಳಲ್ಲಿ ಮೀಸಲಾತಿಗನುಗುಣವಾಗಿ ಅನುಮೋದಿಸಲ್ಪಟ್ಟ ಹುದ್ದೆಗಳನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ತೀರ್ಮಾನಿಸಿತು. ಮುಂದುವರೆದು, ನಿಗಮಕ್ಕೆ ಒಟ್ಟಾರೆಯಾಗಿ ಅಗತ್ಯವಿರುವ ವಿವಿಧ ಹಂತದ ಹುದ್ದೆಗಳನ್ನು ಗುರುತಿಸಿ ವಾಸ್ತವತೆಗೆ ಅನುಗುಣವಾಗಿ ವಿವಿಧ ವೇತನ ಶ್ರೇಣಿಯ ಹುದ್ದೆಗಳನ್ನು ನಿಗಮದಲ್ಲಿ ಸೃಜಿಸಲು ಅಗತ್ಯ ಪ್ರಸ್ತಾವನೆಯನ್ನು ತಯಾರಿಸಿ ಮುಂದಿನ ಆಡಳಿತ ಮಂಡಳಿಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಸರ್ಕಾರಕ್ಕೆ ಸಲ್ಲಿಸಲು ತಿರ್ಮಾನಿಸಲಾಯಿತು.

**ವಿಷಯ ಸಂಖ್ಯೆ:04: ನಿಗಮವು 04 ಜಿಲ್ಲೆಗಳಲ್ಲಿ ನಿವೇಶನ ಹೊಂದಿದ್ದು ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ರವರಿಂದ ಜಿಲ್ಲಾ ಕಛೇರಿ ಕಟ್ಟಡ ಹಾಗೂ ಉದ್ಯೋಗಿಗಳ ವಸತಿಯನ್ನು ನಿರ್ಮಿಸುವ ಬಗ್ಗೆ.**

ಈ ವಿಷಯವನ್ನು ಆಡಳಿತ ಮಂಡಳಿಯು ಸವಿಸ್ತಾರವಾಗಿ ಚರ್ಚಿಸಿ ನಿಗಮದ ಜಿಲ್ಲಾ ಕಛೇರಿಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಅದರ ಸ್ವಾಮ್ಯಕ್ಕೊಳಪಟ್ಟ ನಿಗಮ/ಮಂಡಳಿಗಳಿಗೆ ಉಪಯೋಗವಾಗುವಂತೆ ಸಂಯುಕ್ತ ಕಛೇರಿ ಕಟ್ಟಡ ನಿರ್ಮಿಸಲು ಕೆ.ಆರ್.ಐ.ಡಿ.ಎಲ್, ಬೆಂಗಳೂರು ಇವರು ಸಲ್ಲಿಸಿದ್ದ ಕಟ್ಟಡ ವಿನ್ಯಾಸ ಮತ್ತು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಈ ಕೆಳಕಂಡಂತೆ ನೀಡಲು ತೀರ್ಮಾನಿಸಲಾಯಿತು.

| ಕ್ರ.ಸಂ | ಜಿಲ್ಲೆ | ಸರ್ವೆ ನಂ | ಅಳತೆ | ಅಂದಾಜು ಪಟ್ಟಿ ಲಕ್ಷಗಳಲ್ಲಿ |
|---|---|---|---|---|
| 01 | ಚಾಮರಾಜನಗರ | 437/1 ಎ–1, ಎ–2 | 21ಮೀ X 12ಮೀ | 85.25 |
| 02 | ಚಿಕ್ಕಮಗಳೂರು | 92/1 | 22ಮೀ X 22ಮೀ | 85.71 |
| 03 | ಹಾಸನ | 29ಪಿ, 30ಪಿ, | 120ಮೀ X 74ಮೀ | 129.65 |
| 04 | ಬೀದರ್ | 56, ನವಾಬಾದ್ | 20ಮೀ X 22ಮೀ | 80.00 |
| 05 | ಗುಲ್ಬರ್ಗಾ | 16/1 ಹೀರಾಪುರ | 1.2 ಎಕರೆ | |

04/02/14

**ವಿಷಯ ಸಂಖ್ಯೆ:05: ನಿಗಮದ ಕೇಂದ್ರ ಕಛೇರಿಯ 9 ಮತ್ತು 10ನೇ ಮಹಡಿಯನ್ನು ನವೀಕರಿಣಗೊಳಿಸುವ ಬಗ್ಗೆ.**

ಲೋಕೊಪಯೋಗಿ ಇಲಾಖೆಯ ನಂಬರ್–01 ವಿಭಾಗದ ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುವ ನವೀಕರಣ ಪ್ರಸ್ತಾವನಯನ್ನು ಆಡಳಿತ ಮಂಡಳಿಯು ಸವಿಸ್ತಾರವಾಗಿ ಚರ್ಚಿಸಿ ನಿಗಮದ ಕೇಂದ್ರ ಕಛೇರಿಯನ್ನು ಕಾರ್ಪೋರೇಟ್ ಮಾದರಿಗೆ ಉನ್ನತೀಕರಿಸಿ ನವೀಕರಿಸಲು ರೂ.215.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ತೀರ್ಮಾನಿಸಿತು. ಅಂತೆಯೇ, ಈ ದಿಶೆಯಲ್ಲಿ ನವೀಕರಣ ಕಾರ್ಯವನ್ನು ಕೂಡಲೇ ಲೋಕೋಪಯೋಗಿ ಇಲಾಖೆ ಮುಖಾಂತರ ಕೈಗೆತ್ತಿಕೊಂಡು ಪೂರ್ಣಗೊಳಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ತಿಳುವಳಿಕೆ ನೀಡಿತು.

**ವಿಷಯ ಸಂಖ್ಯೆ:06: ನಿಗಮಕ್ಕೆ ಹೊಸದಾಗಿ 03 ವಾಹನಗಳನ್ನು ಖರೀದಿಸುವ ಬಗ್ಗೆ.**

ಸದರಿ ವಿಷಯದ ಬಗ್ಗೆ ಚರ್ಚಿಸಿದ ಆಡಳಿತ ಮಂಡಳಿಯು ನಿಗಮದ ಹಿರಿಯ ಅಧಿಕಾರಿಗಳ ಅಧಿಕೃತ ಕೆಲಸಕಾರ್ಯಗಳಿಗೆ ಬಳಸಲು ಅನುವಾಗುವಂತೆ 03 ಮಾರುತಿ ಎಸ್‌ಎಕ್ಸ್ 4 ಮಾದರಿಯ ಡೀಸೆಲ್ ವಾಹನಗಳನ್ನು ಡಿಜಿ&ಎಸ್‌ಡಿ ದರವಾದ ರೂ.7.74 ಲಕ್ಷಗಳಂತೆ ಪ್ರತಿವಾಹನಕ್ಕೆ ಅನ್ವಯವಾಗುವಂತೆ ಖರೀದಿಸಲು ತೀರ್ಮಾನಿಸಲಾಯಿತು.

Draft

04/02/2014